10 ನೇ ತರಗತಿ.
ಗಣಿತ.

# ಬಹು ಆಯ್ಕೆ ಪ್ರಶ್ನೆ ಆಧಾರಿತ ಮಾದರಿ ಪ್ರಶ್ನೆ ಪತ್ರಿಕೆ - ②

ಅಂಕಗಳು : 40.
ಸಮಯ : 1 ಗಂಟೆ

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ / ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು OMR ನಲ್ಲಿ ಶೇಡ್ ಮಾಡಿರಿ.** $40 \times 1 = 40$.

1. 6, $a$, $b$, 18 ಸಮಾಂತರ ಶ್ರೇಢಿಯಲ್ಲಿದ್ದರೆ, $a$ ಮತ್ತು $b$ ಗಳ ಬೆಲೆಗಳು ಕ್ರಮವಾಗಿ
A. 10, 14 B. 10, 13 C. 14, 10 D. 8, 12.

2. ಮೊದಲ 20 ಬೆಸ ಸ್ವಾಭಾವಿಕ ಸಂಖ್ಯೆಗಳ ಮೊತ್ತ.
A. 210. B. 420 C. 400. D. 200.

3. ಒಂದು ಸಮಾಂತರ ಶ್ರೇಢಿಯಲ್ಲಿ, $a_n = 7n-3$ ಆದರೆ ಅದರ ಎರಡನೇ ಪದವು
A. 4 B. 11 C. 18. D. 17.

4. ಒಂದು ಸಮಾಂತರ ಶ್ರೇಢಿಯಲ್ಲಿ, $S_n = 3n^2+5n$ ಆದರೆ ಅದರ ಎರಡನೇ ಪದವು
A. 22 B. 14 C. 12 D. 10.


5. ಎರಡು ಅಂಕಿಯ ಎಷ್ಟು ಸಂಖ್ಯೆಗಳು 5 ರಿಂದ ಭಾಗಿಸಲ್ಪಡುತ್ತವೆ ?
A. 18 B. 19 C. 20 D. 22.

6. ಒಂದು ತ್ರಿಭುಜದ ಬಾಹುಗಳ ಅಳತೆಗಳನ್ನು ಕೆಳಗೆ ನೀಡಲಾಗಿದೆ. ಅವುಗಳಲ್ಲಿ ಲಂಬಕೋನ ತ್ರಿಭುಜವನ್ನು ಉಂಟುಮಾಡುವ ಬಾಹುವಿನ ಅಳತೆಯು
A. 7 cm, 24 cm, 25 cm. B. 17 cm, 8 cm, 19 cm. C. 12 cm, 5 cm, 10 cm. D. 4 cm, 5 cm, 6 cm.

7. ಎರಡು ಸಮರೂಪ ತ್ರಿಭುಜಗಳ ವಿಸ್ತೀರ್ಣ ಕ್ರಮವಾಗಿ $120\ cm^2$ ಮತ್ತು $480\ cm^2$ ಇದ್ದರೆ, ಯಾವುದಾದರೂ ಅನುರೂಪ ಬಾಹುಗಳ ಅನುಪಾತವು
A. 1 : 4 B. 4 : 1 C. 1 : 2. D. 2 : 3.

8. ಒಂದು ವಜ್ರಾಕೃತಿಯ ಕರ್ಣಗಳ ಅಳತೆಯು 16 cm ಮತ್ತು 12 cm ಇದ್ದರೆ, ಅದರ ಪ್ರತಿ ಬಾಹುವಿನ ಅಳತೆಯು
A. 9 cm. B. 20 cm. C. 8 cm. D. 10 cm.

9. ಪಕ್ಕದ ಚಿತ್ರದಲ್ಲಿ $DE \parallel BC$, ಆದಾಗ '$x$' ನ ಬೆಲೆಯನ್ನು ಕಂಡುಹಿಡಿಯಿರಿ.
A. 4 B. 4·5 C. 5 D. 3·5




10. ಒಂದು ತ್ರಿಭುಜದ ಬಾಹುಗಳು 3, 4, 6 ಸೆಂ.ಮೀ ಗಳಾಗಿವೆ. ಇದಕ್ಕೆ ಸಮರೂಪವಾದ ಇನ್ನೊಂದು ತ್ರಿಭುಜದ ಅನುರೂಪ ಬಾಹುಗಳ ಅಳತೆಯು
A. 8, 6, 12. B. 8, 4.9 C. 9, 12, 18 D. 2, $4\frac{1}{2}$, 4.


11. ರೇಖಾತ್ಮಕ ಸಮೀಕರಣಗಳಾದ $x+2y-4=0$ ಮತ್ತು $2x+4y-12=0$, ಪ್ರತಿನಿಧಿಸುವ ಸರಳರೇಖೆಗಳು
A. ಛೇದಿಸುವ ರೇಖೆಗಳು. B. ಸಮಾಂತರ ರೇಖೆಗಳು. C. ಐಕ್ಯಗೊಳ್ಳುವ ರೇಖೆಗಳು. D. ಪರಸ್ಪರ ಲಂಬ ರೇಖೆಗಳು.

12. $x-2y=0$ ಮತ್ತು $3x+4y=20$, ಈ ಜೋಡಿ ಸಮೀಕರಣಗಳ ಪರಿಹಾರವು
A. $x=2$ ಮತ್ತು $y=4$, B. $x=1$ ಮತ್ತು $y=1$. C. $x=3$ ಮತ್ತು $y=2$. D. $x=4$, ಮತ್ತು $y=2$.

13. ಬಿಂದು (4, 3) ಈ ರೇಖೆಯ ಮೇಲಿದೆ.
A. $3x+7y=27$. B. $7x+2y=47$. C. $3x+4y=24$. D. $5x-4y=1$.

14. $2x+3y=5$ ಮತ್ತು $10x+15y=2k$ ಈ ಜೋಡಿ ಸಮೀಕರಣದ ರೇಖೆಯು, ಐಕ್ಯಗೊಳ್ಳುವ ರೇಖೆಯನ್ನು ಪ್ರತಿನಿಧಿಸಿದರೆ, '$k$' ಯ ಬೆಲೆಯು,
A. $\frac{-25}{2}$. B. $-5$. C. $\frac{25}{2}$ D. $\frac{-5}{2}$.

15. ಪಕ್ಕದ ಚಿತ್ರದಲ್ಲಿ, 'O' ವೃತ್ತಕೇಂದ್ರ. $\angle AOB = 100^\circ$ ಆದರೆ $\angle OAB =$
A. $80^\circ$ B. $50^\circ$ C. $40^\circ$ D. $30^\circ$




PREPARED BY SHRIDHAR BHAT. K.P.S VANDSE, KUNDAPUR (T), UDUPI (D) PH: 8970072663.



Continued ....→


LIVEWORKSHEETS

16. ವೃತ್ತದ ಒಳಗಿನ ಬಿಂದು 'P' ಯಿಂದ ವೃತ್ತಕ್ಕೆ ಎಳೆಯಬಹುದಾದ ಸ್ಪರ್ಶಕಗಳ ಸಂಖ್ಯೆ.
A. 0 B. 1 C. 2 D. 3.

17. ಬಾಹ್ಯಬಿಂದುವಿನಿಂದ ವೃತ್ತಕ್ಕೆ ಸ್ಪರ್ಶಕವನ್ನು ಎಳೆದಾಗ, ಸ್ಪರ್ಶಕ ಮತ್ತು ಸ್ಪರ್ಶಬಿಂದುವಿನಲ್ಲಿ ಎಳೆದ ತ್ರಿಜ್ಯದ ನಡುವೆ ಏರ್ಪಡುವ ಕೋನ.
A. ಲಘುಕೋನ. B. ವಿಶಾಲಕೋನ. C. ಲಂಬಕೋನ. D. ಸರಳಕೋನ.

18. ಬಾಹ್ಯಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕದ ಉದ್ದ 5cm ಮತ್ತು ಬಾಹ್ಯಬಿಂದುವಿನಿಂದ ವೃತ್ತಕೇಂದ್ರ ನಡುವಿನ ದೂರ 13 cm ಆದರೆ ಸ್ಪರ್ಶಕದ ಉದ್ದವು
A. 11 cm B. 12 cm. C. 12.5 cm. D. 12.8 cm.

19. ಒಬ್ಬ ವಿದ್ಯಾರ್ಥಿಯು AB = 10 cm. ಇರುವ ರೇಖಾಖಂಡವನ್ನು 3 : 2 ಅನುಪಾತದಲ್ಲಿ ಜ್ಯಾಮಿತಿಯ ರಚನೆಯ ಪ್ರಕಾರ ಚಿತ್ರದಲ್ಲಿ ತೋರಿಸುವಂತೆ ವಿಭಾಗಿಸುತ್ತಾನೆ. ಲೆಕ್ಕಾಚಾರ ವಿಧಾನದಲ್ಲಿ ಕಂಡುಹಿಡಿದಾಗ AD ಮತ್ತು DB ಯ ಅಳತೆಯು
A. 6.5 cm ಮತ್ತು 3.5 cm. B. 5 cm ಮತ್ತು 5 cm.
C. 6 cm ಮತ್ತು 4 cm. D. 5.5 cm ಮತ್ತು 4.5 cm.




20. ಬಿಂದು P (3,-5) $x$- ಅಕ್ಷದಿಂದ ಇರುವ ಕನಿಷ್ಠ ದೂರ
A. 4 ಮಾನ. B. 2 ಮಾನ. C. 3 ಮಾನ. D. 5 ಮಾನ.

21. ವೃತ್ತ ಕೇಂದ್ರ ಮತ್ತು ವೃತ್ತ ಪರಿಧಿಯ ಮೇಲಿನ ಬಿಂದುವಿನ ನಿರ್ದೇಶಾಂಕವು ಕ್ರಮವಾಗಿ (3, 4) ಮತ್ತು (-3, -4) ಆದಾಗ ತ್ರಿಜ್ಯದ ಅಳತೆಯು
A. 6 ಮಾನ B. 8 ಮಾನ. C. 10 ಮಾನ. D. $2\sqrt{7}$ ಮಾನ.

22. (-6, 2) ಮತ್ತು (-8, 4) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದುವಿನ ನಿರ್ದೇಶಾಂಕ
A. (5, 2) B. (-7, 3) C. (2, 5) D. (3, -7).

23. (1, -1) (-4, 6) ಮತ್ತು (-3, -5) ನಿರ್ದೇಶಾಂಕಗಳನ್ನು ಹೊಂದಿರುವ ತ್ರಿಭುಜದ ವಿಸ್ತೀರ್ಣವು
A. 26 ಚ.ಮಾನ. B. 34 ಚ.ಮಾನ. C. 24 ಚ.ಮಾನ. D. 28 ಚ.ಮಾನ.

24. ವರ್ಗ ಸಮೀಕರಣದ ಆದರ್ಶ ರೂಪವು
A. $ax^2+bx-c=0$. B. $ax^2+bx+c=0$. C. $ax^2-bx-c=0$. D. $ax^2-bx+c=0$.

25. $x^2-4x+1=0$. ವರ್ಗಸಮೀಕರಣದ ಮೂಲಗಳ ಸ್ವಭಾವವು
A. ವಾಸ್ತವ ಮತ್ತು ಭಿನ್ನ. B. ವಾಸ್ತವ ಮತ್ತು ಸಮ. C. ವಾಸ್ತವ ಮೂಲಗಳಿಲ್ಲ. D. ಅಭಾಗಲಬ್ಧ ಮತ್ತು ಅಸಮ

26. $x^2-4x=0$, ವರ್ಗ ಸಮೀಕರಣದ ಮೂಲಗಳು
A. 0 ಮತ್ತು 4 B. -4 ಮತ್ತು 0 C. -2 ಮತ್ತು 0 D. 0 ಮತ್ತು 2.

27. ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧ 30. ಈ ಹೇಳಿಕೆಯ ಸಮೀಕರಣ ರೂಪ
A. $x(x+2)=30$. B. $x(x-2)=30$. C. $x(x-3)=0$. D. $x(x+1)=30$.


28. $\tan 45^\circ + \cot 45^\circ$ ಇದರ ಬೆಲೆ
A. $\frac{\sqrt{3}}{2}$ B. 0 C. 1 D. 2.

29. $\frac{\sin(90-\theta)}{\cos(90-\theta)}$ ಇದರ ಬೆಲೆಗೆ ಸಮನಾದುದು
A. $\cot\theta$ B. $\tan\theta$ C. $\sec\theta$ D. $\operatorname{cosec}\theta$.

30. $3\tan\theta=1$ ಆದಾಗ, $\sin\theta$ ದ ಬೆಲೆಯು
A. 1 B. $\frac{1}{3}$ C. 10 D. $\frac{1}{\sqrt{10}}$

31. ಕೆಳಗಿನವುಗಳಲ್ಲಿ ತಪ್ಪಾದ ಸಂಬಂಧವು
A. $\sin^2\theta = 1-\cos^2\theta$. B. $1+\tan^2\theta = \sec^2\theta$. C. $\tan\theta = \frac{1}{\cot\theta}$ D. $1-\cot^2\theta = \operatorname{cosec}^2\theta$.

32. ಪಕ್ಕದ ಚಿತ್ರದಲ್ಲಿ, AB = 15cm, ∠C = 30°, ಆದಾಗ BC ಯ ಅಳತೆಯು
A. 15 cm. B. 30 cm. C. $15\sqrt{3}$ cm. D. $15\sqrt{2}$ cm.






Continued ....→

LIVEWORKSHEETS

33. ಮೊದಲ 10 ಬೆಸ ಸಂಖ್ಯೆಗಳ ಸರಾಸರಿ.

A. 10　　B. 50　　C. 25.　　D. 100.

34. ಈ ಕೆಳಗಿನ ಆವೃತ್ತಿ ವಿತರಣಾ ಪಟ್ಟಿಯಲ್ಲಿ, ಬಹುಲಕವಿರುವ ವರ್ಗಾಂತರ

| ವರ್ಗಾಂತರ | 10 - 15 | 15 - 20 | 20 - 25 | 25 - 30 | 30 - 35 |
|---|---|---|---|---|---|
| ಆವೃತ್ತಿ | 4 | 7 | 12 | 8 | 2 |

A. 15-20　　B. 20-25.　　C. 25-30.　　D. 30-35.

35. ವರ್ಗೀಕೃತ ದತ್ತಾಂಶಗಳ ಮಧ್ಯಾಂಕವನ್ನು ಕಂಡುಹಿಡಿಯುವ ಸೂತ್ರ

A. $l+\left[\frac{\frac{n}{2}-cf}{f}\right]\times h$.　　B. $l+\left[\frac{\frac{n}{2}+cf}{f}\right]\times h$.　　C. $l-\left[\frac{\frac{n}{2}-cf}{f}\right]\times h$.　　D. $l-\left[\frac{\frac{n}{2}+cf}{f}\right]\times h$.

36. ಒಂದು ಸಿಲಿಂಡರ್‌ನ ಪಾದದ ವಿಸ್ತೀರ್ಣ $80 cm^2$ ಮತ್ತು ಅದರ ಎತ್ತರ 6cm ಆದರೆ, ಅದರ ಘನಫಲವು

A. $240 cm^3$　　B. $100 cm^3$　　C. $480 cm^3$　　D. $120 cm^3$

37. 6 cm, 8cm ಮತ್ತು 10cm ವ್ಯಾಸವಿರುವ ಮೂರು ಘನಗೋಳಗಳನ್ನು ಕರಗಿಸಿ, ಒಂದು ದೊಡ್ಡ ಗೋಳವನ್ನಾಗಿ ಪರಿವರ್ತಿಸಲಾಗಿದೆ. ದೊಡ್ಡ ಗೋಳದ ವ್ಯಾಸದ ಅಳತೆಯು

A. 6 cm.　　B. 4.5cm.　　C. 3 cm.　　D. 12 cm.


38. ಈ ಕೆಳಗಿನ ಕೋಷ್ಟಕದಲ್ಲಿ ಸರಿಯಾದ ಸಂಬಂಧವು

| | ಘನಾಕೃತಿಗಳು | ಘನಫಲ |
|---|---|---|
| A | ಸಿಲಿಂಡರ್ | $\frac{1}{3}\pi r^2 h$ |
| B | ಶಂಕು | $\pi r^2 h$ |
| C | ಗೋಳ | $\frac{2}{3}\pi r^3$ |
| D. | ಶಂಕುವಿನ ಛಿನ್ನಕ | $\frac{1}{3}\pi h(r_1^2+r_2^2+r_1 r_2)$ |

39 ಒಂದು ಶಂಕುವಿನ ಎತ್ತರ ಮತ್ತು ಓರೆ ಎತ್ತರಗಳು ಕ್ರಮವಾಗಿ 12cm ಮತ್ತು 13cm ಆದರೆ, ಅದರ ವ್ಯಾಸದ ಅಳತೆಯು

A. 5cm.　　B. 10cm.　　C. 12cm.　　D. 12.5cm.

40. ಚಿತ್ರದಲ್ಲಿ ತೋರಿಸಿರುವ ಘನಾಕೃತಿಯು ಇವುಗಳ ಜೋಡಣೆಯಿಂದ ಆಗಿರುವುದು.



A. ಒಂದು ಶಂಕು, ಒಂದು ಸಿಲಿಂಡರ್ ಮತ್ತು ಒಂದು ಅರ್ಧಗೋಳ.

B. ಒಂದು ಶಂಕು, ಒಂದು ಸಿಲಿಂಡರ್ ಮತ್ತು ಒಂದು ಗೋಳ.

C. ಒಂದು ಶಂಕುವಿನ ಛಿನ್ನಕ, ಒಂದು ಸಿಲಿಂಡರ್, ಮತ್ತು ಒಂದು ಅರ್ಧಗೋಳ.

D. ಒಂದು ಶಂಕುವಿನ ಛಿನ್ನಕ, ಒಂದು ಆಯತಘನ ಮತ್ತು ಒಂದು ಗೋಳ.

. . . . . . . . . . . .



Scanned by CamScanner LIVEWORKSHEETS